4. ದರಖಾಸ್ತು ಮಾಡಲು ಬೆದ್ದೇಸಿಸುವ ಕಂಟ್ರಾಕ್ಟುದಾರು ಮೇಲ್ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ಕಾಣಿಸಿರುವ ಡಿಪೋಗಳಿಗೆ ನಾಟಾ ಯಾ ಬೌಬೀನೆಯನ್ನು ಭಂಡಿ ಮೂಲಕ ಸಾಗಿಸುವದಕ್ಕೆ ತಾವು ಅಪೇಕ್ಷಿಸುವ ಕಮ್ಮೀ ದರವನ್ನು ನಮೂದಿಸತಕ್ಕದ್ದು.

5. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರ್‌ಟೆಂಡೆಂಟರಿಂದ ಮೈಸೂರು ಮೊಕ್ಕಾಂ ಆವರ ಆಫೀಸಿನಲ್ಲಿ ದರಖಾಸ್ತು ಮಾಡಲಿಚ್ಛೆಪಟ್ಟ ಮುಳ್ಳ ಕಂಟ್ರಾಕ್ಟುದಾರರು ಇತರ ತಪಶೀಲ್‌ಗಳನ್ನ ಖುದ್ದಾಗಿ ಕೇಳಿ ತಿಳಿದುಕೊಳ್ಳಬಹುದು.

ಸಿ. ನಾರಾಯಣರಾವ್,
ಫಾರೆಸ್ಟ್ ಸೂಪರ್‌ಟೆಂಡೆಂಟ್.

ಹಾಸನ ಸಬ್ ಡಿವೀಜ್ಯ.

ತಾರೀಖು 4ನೇ ಫಿಬ್ರವರಿ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದಿವಾ ಸಾಹೇಬರವರ ಹುಕ್ಕುಂ ಐವೋಜೀಬ್ ಹಾಸನ ಸಬ್ ಡಿವೀಜ್ಯ್‌ದೈಕಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರನಹಳ್ಳಿ ಫಾಟಿಯಲ್ಲಿ ಟೋಲ್‌ಗೇಟ್ ಯೆಂಬ ಸುಂಕದ ಕಟ್ಟೆ ವಳಗೆ ಸ್ಯ 1885ನೇ ಏಪ್ರಲ್ ಮಾಹೆ 1ನೇ ಮಕ್ಕುಂ ಲಾಗಾಯಿತು 1886ನೇ ಇಸವಿ ಮಾರ್ಚಿ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯವು ಸ್ಯ 1885ನೇ ಇಸವಿ ಮಾರ್ಚಿ ತಾರೀಖು 18ರಲ್ಲು ಸಕ್ಲೇಪುರ ಮೊಕ್ಕಾಂ ತಾಲ್ಲೂಕು ಕಛೇರಿಯೊಳಗೆ ಬಹಿರಂಗವಾದ ಹರಾಜಿ ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲೀ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲ್‌ನಲ್ಲಿ ನಮೂದಾಗಿ ಇರುವ ದರಗಳ ಮೇರಿಗೇನೆ ಟೋಲ್ ವಸೂಲ್ ಮಾಡಬೇಕು ಮತ್ತು ಸ್ಯ 1876ನೇ ಇಸವಿ ನವೆಂಬರ್ 4ನೇ ಮಕ್ಕುಂ 274ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷ್‌ನಲ್ಲಿ ಫಾಯಿಷ್ ಆಗಿ ಇರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಜಕಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಸಬ್ ಡಿವೀಜ್ಯ ಆಫೀಸರವರು ಅಧಿಕಾರ ವುಳಸಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ವೆಂದಂಕ ಮೊಬಲಗನ್ನು ಅಡ್ವಾನ್ಸಾಗಿ ತೇವಣಿ ಇಟ್ಟು ಬಾಕಿ ಮೊಬಲಗನ್ನು 1885ನೇ ಇಸವಿ ಏಪ್ರಿಲ್ 20ರ ಲಾಗಾಯಿತು ಸಮನಾದ ಆರು ಖಿಸ್ತುಗೆ ಆಗಿ ಪ್ರತಿ ತಿಂಗಳು 20ನೇ ತಾರೀಖಿಗೆ ಪಾವತೀ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೇವಾರೀ ಖಿಸ್ತು ಮೊಬಲಗನ್ನೂ ತಪ್ಪದೇ ಕೊಡುತ್ತಾ ಬರುವದಕ್ಕೆ ಲಾಯಖಾದ ವಬ್ಬನನ್ನು ಜಾಮೀನು ಕೊಡಬೇಕು.

5. ತೇವಣಿ ಇಡದೇ ಇದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನ್‌ಕರವಾಗಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕೀಯಾದ ಮೊಬಲಗಿಗೆ ಪಾವತೀ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವಂದು ಕಾಸಿನಂತೆ ಬಡ್ಡಿ ವಸೂಲ್ ಮಾಡಲ್ಪಡುವದು. ಮತ್ತು ಸಬ್ ಡಿವೀಜ್ಯ ಆಫೀಸರವರು ತಮಿಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀನುದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ಯರಡನೇ ಹರಾಜ್ ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಅದರಿಂದ ಯೀನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನುದಾರನಿಂದ ಕಂದಾಯದ ಬಾಕಿಯಂತೆ ವಸೂಲ್‌ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಶಿವಾಯ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಪರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ನದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ವಂದಾಣಿಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಇರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರ್‌ವಾಕಾ ಲೆಕ್ಕವನ್ನ ಇಡಲೂ ಸಹಾ ಕಂಟ್ರಾಕ್ಟುದಾರನು ಬದ್ಧನಾಗಿ ಇರುವದಲ್ಲದೆ ಸಬ್ ಡಿವೀಜ್ಯ ಮತ್ತು ತಾಲ್ಲೂಕು ವುದ್ಯೋಗಸ್ಥರ ಇನ್‌ಸ್ಪೆಕ್ಷಣೆಗೆ ಲೆಕ್ಕ ವಳಗಾಗಿ ಇರತಕ್ಕದ್ದು.

8. ಗವರ್ನ್‌ಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ನುಪಯೋಗಿಸತಕ್ಕದ್ದು ಮತ್ತು ಅವುಗಳನ್ನ ಅತನು ಪೂರಾ ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತೇ ತಾರೀಖಿನಲ್ಲಿ ಹಿಂದಣ ತಿಂಗಣ ಟೋಲ್ ವಸೂಲೀ ಲೆಕ್ಕವನ್ನ ಮಂಜರಾಬಾದ್ ತಾಲ್ಲೂಕು ಕಛೇರಿಗೆ ಕಳುಹಿಸತಕ್ಕದ್ದು. ದರಗಳ ಪಟ್ಟಿ 1882ನೇ ಮಾರ್ಚಿ 18ನೇ ಮಕ್ಕೂಂ ಮೈಸೂರ್ ಗೆಜಟ್ಟಿನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಸಬ್ ಡಿವೀಜ್ಯ ಆಫೀಸರ್.